ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಹಾಗಿದ್ದರೆ ನಾಳೆಯೇ ಪ್ರಸ್ತಾಪ ಮಾಡುತ್ತೇನೆ.

ಆ) ಬಿಜಾಪುರದಲ್ಲಿ ನಡೆದಿರುವ ಆಲಮಟ್ಟಿ ಹೋರಾಟ ಸಮಿತಿಯ ಆಮರಣ ಉಪವಾಸದ ಬಗ್ಗೆ.

ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಅಧ್ಯಕ್ಷರೆ, ಬಿಜಾಪುರದಲ್ಲಿ ಆಲಮಟ್ಟಿ ಹೋರಾಟ ಸಮಿತಿಯ ವತಿಯಿಂದ ಆಲಮಟ್ಟಿಯ ಎತ್ತರವನ್ನು 524 ಮೀಟರ್‌ವರೆಗೆ ಎತ್ತರಿಸಬೇಕೆಂಬ ವಿಚಾರದಲ್ಲಿ ಒಂದು ತಿಂಗಳಿನಿಂದ ಸತ್ಯಾಗ್ರಹ ನಡೆಯುತ್ತಿತ್ತು. ಕಳೆದ ತಿಂಗಳ 23 ಮತ್ತು 24ರಂದು ಭಾರಿ ನೀರಾವರಿ ಸಚಿವರಾಗಿರುವ ಮಾನ್ಯ ಹೆಚ್. ಕೆ. ಪಾಟೀಲರು ಮತ್ತು ಬಿಜಾಪುರದ ಎಲ್ಲಾ ಶಾಸಕರು ಮತ್ತು ಪಾರ್ಲಿಮೆಂಟ್ ಸದಸ್ಯರು ಕರಸೇವೆ ಮಾಡಬೇಡಿ ಎಂದು ಮನವೊಲಿಸುವ ಸಲುವಾಗಿ ನಾವೆಲ್ಲರು ಅಲ್ಲಿ ಭೇಟಿ ಕೊಟ್ಟಿದ್ದೆವು. 26ರಂದು ಕರಸೇವೆ ಮಾಡುವುದಾಗಿ ಆ ಸತ್ಯಾಗ್ರಹಿಗಳು ಸೂಚನೆ ಕೊಟ್ಟಿದ್ದರು. ಆ ರೀತಿ ಕರಸೇವೆ ಮಾಡಬೇಡಿ ಎಂದು ಅವರುಗಳ ಮನವೊಲಿಸುವ ಸಲುವಾಗಿ ನಾವುಗಳೆಲ್ಲರು ಭೇಟಿ ಕೊಟ್ಟಿದ್ದೆವು. ನಗರಾಭಿವೃದ್ಧಿ ಸಚಿವರಾದ ಚಿಮ್ಮನಕಟ್ಟಿಯವರು ಎರಡೂ ಜಿಲ್ಲೆಯ ಎಲ್ಲಾ ಶಾಸಕರು ಮತ್ತು ಸಂಸತ್ತಿನ ಸದಸ್ಯರು ಅಲ್ಲಿಗೆ ಹೋಗಿದ್ದೆವು. ಕರಸೇವೆ ಮಾಡುವ ಮುಖಂಡರು ಕರಸೇವೆ ಮಾಡುವುದನ್ನು ವಾಪಸ್ ತೆಗೆದುಕೊಳ್ಳುವುದಿಲ್ಲವೆಂಬ ಮಾತನ್ನು ಹೇಳಿದರು. ಭಾರಿ ನೀರಾವರಿ ಸಚಿವರು ಅವರುಗಳ ಮನವೊಲಿಸುವ ಸಲುವಾಗಿ ಇಡೀ ದಿನ ಅವರ ಜೊತೆ ಮಾತುಕತೆ ನಡೆಸಿದರು. ಆದರೂ ಅವರು ಮಾತು ಕೇಳದೆ 26 ರಂದು ಕರಸೇವೆ ಮಾಡುವುದಾಗಿ ಹೇಳಿದರು. ಆಗ ಎರಡೂ ಜಿಲ್ಲೆಗಳ ಶಾಸಕರು, ಸಂಸತ್ತಿನ ಸದಸ್ಯರು ಆ ರೀತಿ ಕರಸೇವೆಗೆ ನಾವುಗಳು ಬೆಂಬಲ ಕೊಡುವುದಿಲ್ಲ, ಈ ವಿಚಾರ ಉಚ್ಚನ್ಯಾಯಾಲಯದ ಮುಂದಿದೆ ಎಂಬ ವಿಚಾರವನ್ನು ಹೇಳಿ ನೀರಾವರಿ ವಿಚಾರಕ್ಕೆ ಸಂಬಂಧಪಟ್ಟಂತೆ ನಾವು ಸಂಪೂರ್ಣವಾಗಿ ಬೆಂಬಲ ಕೊಡುತ್ತೇವೆ ಎನ್ನತಕ್ಕ ಮಾತನ್ನು ನಾವುಗಳು ಹೇಳಿದ್ದೆವು. ಆದರು ಸಹ ಅಲ್ಲಿರುವ ಯರನಾಳದ ಸಂಗನಬಸವಸ್ವಾಮೀಜಿಯವರ ನೇತೃತ್ವದಲ್ಲಿ ಕಳೆದ ಐದು ದಿವಸಗಳ ಹಿಂದೆ ನಾಲ್ಕೈದು ಜನ ಆಮರಣಾಂತರ ಉಪವಾಸವನ್ನು ಮಾಡುತ್ತಿದ್ದಾರೆ. ಅದರಲ್ಲಿ ಒಬ್ಬರ ಸ್ಥಿತಿ ಚಿಂತಾಜನಕವಾಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ನಾಳೆಯಿಂದ ಯರನಾಳದ ಪೂಜ್ಯ ಸ್ವಾಮೀಜಿಯವರು ಸಹ ಆಮರಣಾಂತರ ಉಪವಾಸದಲ್ಲಿ ಪಾಲುಗೊಳ್ಳುವುದಾಗಿ ಹೇಳಿದ್ದಾರೆ. ಮುಖ್ಯ ಮಂತ್ರಿಗಳು ಉಚ್ಚನ್ಯಾಯಾಲಯದ ನಿರ್ಣಯದವಾದ ಮೇಲೆ ಬಿಜಾಪುರ ಜಿಲ್ಲೆಗೆ ನೀರಾವರಿ ಯೋಜನೆಯನ್ನು ಸಂಪೂರ್ಣವಾಗಿ ಮಾಡುತ್ತೇವೆ ಎಂದು ಭರವಸೆಯನ್ನು ಕೊಟ್ಟರೆ ನಾವು ಸತ್ಯಾಗ್ರಹವನ್ನು ವಾಪಸ್ ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ಪ್ರಜಾವಾಣಿ ಪತ್ರಿಕೆಯಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ಮಾನ್ಯ ನೀರಾವರಿ ಸಚಿವರು ಬಿಜಾಪುರ ಜಿಲ್ಲೆಯ ನೀರಾವರಿ ವಿಚಾರದಲ್ಲಿ ಯಾವುದೇ ಮೀನಾಮೇಶ ಮಾಡದೆಯೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಅದೇ ರೀತಿ ಮುಖ್ಯಮಂತ್ರಿಗಳು ಸಹ ಇದರ ಬಗ್ಗೆ ಸಮಾಧಾನಕರವಾದ ಮಾತನ್ನು ಸ್ವಾಮೀಜಿಯವರಿಗೆ ಹೇಳಿ ಆ ಸತ್ಯಾಗ್ರಹವನ್ನು ವಾಪಸ ತೆಗೆದುಕೊಳ್ಳಲು ಮನವಿ ಮಾಡಿಕೊಳ್ಳಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

+ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಕೃಷ್ಣ ಕರ್ನಾಟಸದ ಜೀವನಾಡಿ. ಕರ್ನಾಟಕದ ಸುಮಾರು 60ರಷ್ಟು ನೀರಾವರಿ ಭೂ ಪ್ರದೇಶವನ್ನು ಕೃಷ್ಣ ನದಿಯ ಪಾತ್ರ ಆವರಿಸಿಕೊಂಡಿದೆ. ಕೃಷ್ಣ ಮೇಲ್ದಂಡೆ ಯೋಜನೆ ಇಡೀ ಕೃಷ್ಣ ಯೋಜನೆಯಲ್ಲಿಯೆ

ಅತ್ಯಂತ ಪ್ರತಿಷ್ಠಿತವಾದ ಯೋಜನೆ. ಈ ಯೋಜನೆಯ ಅನುಷ್ಠಾನದಲ್ಲಿ ರಾಜ್ಯ ಸರ್ಕಾರ ಸಹ ಅರ್ಪಣಾ ಮನೋಭಾವದಲ್ಲಿ ಕೆಲಸ ಮಾಡುತ್ತಿದೆ ಎಂಬುದನ್ನು ಶ್ರೀ ಸಂಗಬಸವನ ಸ್ವಾಮಿಗಳು ಮತ್ತು ಅವರ ಸಂಗಡಿಗಳು ಎಲ್ಲಾ ರಾಜಕೀಯ ಮುಖಂಡರುಗಳಿಗೂ ತಿಳಿದಿದೆ. ಆದರೆ ದುರಾದೃಷ್ಟವಶಾತ್ ಈ ವ್ಯಾಜ್ಯ ನ್ಯಾಯಾಲಯದ ಕಟ್ಟಿಯನ್ನು ಹತ್ತಿಬಿಟ್ಟಿದೆ. ಅಲ್ಲಿ ಸಾಕಷ್ಟು ವಾದವಿವಾದಗಳು ನಡೆದು ರಾಜ್ಯದ ವಕೀಲರುಗಳ ವೃಂದ, ಅದಲ್ಲದೆ ಮಾನ್ಯ ಮುಖ್ಯಮಂತ್ರಿಗಳೆ ಎರಡು ಬಾರಿ ಸುಪ್ರೀಮ್ ಕೋರ್ಟ್‌ನ ಮುಂದೆ ಹೋಗಿದ್ದಾರೆ. ಸಂಬಂಧಪಟ್ಟ ಸಚಿವರು ಇಪ್ಪತ್ತು ಗಂಟೆಗಳ ಕಾಲ ಅಲ್ಲಿ ಕಳೆದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಜೊತೆ ನಾನು ಕೂಡ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಿ ವಾದವನ್ನು ಆಲಿಸಿದ್ದೇನೆ. ರಾಜ್ಯದ ಗೌರವಾನ್ವಿತ ನ್ಯಾಯವಾದಿಗಳು ಮತ್ತು ಅವರಿಗೆ ಸಹಾಯಕವಾಗಿ ಈ ರಾಷ್ಟ್ರದ ಹೆಮ್ಮೆಪಡುವಂಥ ಎಲ್ಲ ವಕೀಲರುಗಳ ನೇಮಕವಾಗಿದೆ. ಅವರು ತಮ್ಮ ವಾದವನ್ನು ಸಮರ್ಥವಾಗಿ ಮಂಡನೆ ಮಾಡಿದ್ದಾರೆ ಎಂಬ ಸಮಾಧಾನ ರಾಜ್ಯ ಸರ್ಕಾರಕ್ಕೆ ಇದೆ. ವಾಸ್ತವಿಕ ಅಂಶ ಏನು ಎಂದರೆ, ಕೃಷ್ಣ ಮೇಲ್ದಂಡೆ ಯೋಜನೆಯ ಎತ್ತರವನ್ನು 524.2 ಮೀಟರ್ ಎತ್ತರದವರೆಗೆ ಏರಿಸಬೇಕು, ಈ ರೀತಿ ಎತ್ತರವನ್ನು ಏರಿಸಿದ್ದರಿಂದ ಬಂದಂಥ ನೀರಾವರಿಯ ಲಾಭ ಬಿಜಾಪುರ ಜಿಲ್ಲೆಯ ಜನರಿಗೆ ಸಿಗಬೇಕು ಎಂಬ ಸದಿಚ್ಛೆ ಸ್ವಾಮಿಗಳು ಮತ್ತು ಅವರ ಸಂಗಡಿಗರಿಗೆ ಏನಿದೆ ಅದೇ ಇಚ್ಛೆ ಕರ್ನಾಟಕ ಸರ್ಕಾರಕ್ಕೂ ಇದೆ. ಇದರ ಜೊತೆಗೆ 524.2 ಮೀಟರ್ ಎತ್ತರಕ್ಕೆ ಇದನ್ನು ಕಟ್ಟುತ್ತೇವೆ ಎಂಬುದು ರಾಜ್ಯದ ನಿಲುವಾಗಿದೆ. ರಾಜ್ಯ ಸರ್ಕಾರದ ಪರವಾಗಿ ಅವರು ಹೋರಾಟ ಮಾಡುತ್ತಿದ್ದರೆ ನಮ್ಮ ಅಭ್ಯಂತರವೇನಿಲ್ಲ. ರಾಜ್ಯದ ನಿಲುವಿನ ವಿರೋಧವಾಗಿ ಅವರೂ ಇಲ್ಲ, ರಾಜ್ಯ ಸರ್ಕಾರ ಸಹ ಅವರ ನಿಲುವಿನ ವಿರೋಧವಾಗಿ ಅವರೂ ಇಲ್ಲ, ರಾಜ್ಯ ಸರ್ಕಾರ ಸಹ ಅವರ ನಿಲುವಿಗೆ ವಿರೋಧವಾಗಿಲ್ಲ. ಹಾಗಿದ್ದರೆ ಹೋರಾಟ ಏತಕ್ಕೆ ಎಂಬುದು ನನಗಂತು ತಿಳಿಯುತ್ತಿಲ್ಲ. ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ವಿರುದ್ಧವಾಗಿ ನಾವೇನು ಹೋರಾಟ ಮಾಡಬಹುದು? ಎಲ್ಲರೂ ಸೇರಿ ನಮ್ಮ ಪರವಾಗಿ ತೀರ್ಪು ಆಗಲಿ ಎಂದು ಪ್ರಾರ್ಥನೆ ಮಾಡಬಹುದಷ್ಟೆ. ಬಹಳ ಸಮರ್ಥವಾದ ವಾದವನ್ನು ನಾವು ಅಲ್ಲಿ ಮಂಡಿಸಿದ್ದೇವೆ. ಇದರಲ್ಲಿ ನಮಗೆ ಸೇರಬೇಕಾದ ಪಾಲು ಏನಿದೆ ಅದು ಸೇರುತ್ತದೆ. ಅಂಥ ನ್ಯಾಯವನ್ನು ಸರ್ವೋಚ್ಚ ನ್ಯಾಯಾಲಯ ಒದಗಿಸಿಕೊಡುತ್ತದೆ ಎಂಬ ವಿಶ್ವಾಸ ನಮಗೆ ಇದೆ. ಈ ಮಧ್ಯೆ ಕಳೆದ ಒಂದು ತಿಂಗಳಿನಿಂದ ಶ್ರೀ ಸಂಗಬಸವನಸ್ವಾಮಿ ಯರನಾಳ ಇವರ ನೇತೃತ್ವದಲ್ಲಿ ಅಲ್ಲಿ ಮುಷ್ಕರ ನಡೆದಿದೆ. ಕಳೆದ 4-5 ದಿವಸಗಳಿಂದ ಅಲ್ಲಿ ಉಪವಾಸ ಮುಷ್ಕರ ಸಹಾ ನಡೆದಿದೆ. ನಾನು ರಾಜ್ಯ ಸರ್ಕಾರದ ಪರವಾಗಿ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ, ರಾಜ್ಯದ ಜನತೆಯ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ನಿಮ್ಮೆಲ್ಲರ ಪರವಾಗಿ, ಇಲ್ಲಿ ಆಡಳಿತ ಪಕ್ಷ, ವಿರೋಧ ಪಕ್ಷ ಎಂಬ ಭಾವನೆ ಇಟ್ಟುಕೊಳ್ಳದೇ, ಸದ್ಭಾವನೆಯಿಂದ ಒಟ್ಟಾಗಿ ನಾವು ಈ ಒಂದು ಕೃಷ್ಣಾ ನದಿಯ ವಿವಾದ ಏನಿದೆ ಅದು ಬಗೆಹರಿದು ನಮಗೆ ಬರಬೇಕಾದಂತಹ ಪಾಲು ಪರಿಪೂರ್ಣವಾಗಿ ಬಂದು 524.2 ಮೀಟರ್‌ಗೆ ಈ ಒಂದು ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು ಏರಿಸತಕ್ಕಂಥ ನಮ್ಮ ಚಿಂತನೆ ಏನಿದೆ, ನಮ್ಮ ಆಲೋಚನೆ ಏನಿದೆ, ಇದಕ್ಕೆ ಎಲ್ಲರೂ ಕೈ ಜೋಡಿಸಬೇಕೆಂದು ನಾವು ಪ್ರಾರ್ಥನೆ ಮಾಡಬಹುದು. ಈ ಹಂತದಲ್ಲಿ ವಿವಾದ ಸರ್ವೋಚ್ಚ ನ್ಯಾಯಾಲಯದಲ್ಲಿರುವ ಕಾರಣ ನಾನೇನೂ ಹೇಳುವುದಿಲ್ಲ. ರಾಜ್ಯದ ಹಿತದ ಪರವಾಗಿ ತೀರ್ಪು ಬರುತ್ತದೆಂದು ನಾವು ಆಶಿಸೋಣ. ಇಂತಹ ಸಮಯದಲ್ಲಿ ಉಪವಾಸ, ಅಮರಣಾಂತರ ಉಪವಾಸಗಳಿಂದ ಏನೂ ಪ್ರಯೋಜನವಾಗುವುದಿಲ್ಲ ಎಂಬುದು ನನ್ನ ಸ್ವಂತ ಅಭಿಪ್ರಾಯ. ಈ ಆನಿಸಿಕೆಗೆ ವಿರುದ್ಧವಾಗಿ ಈ ರಾಜ್ಯ ಸರ್ಕಾರ ಏನನ್ನು ಮಾಡಬೇಕೆಂದು ಅಲ್ಲಿ ಉಪವಾಸ ಮಾಡುತ್ತಿರುವವರು ನಿರೀಕ್ಷೆ

ಮಾಡುತ್ತಿದ್ದಾರೆಂಬುದು ನನಗೆ ತಿಳಿಯುತ್ತಿಲ್ಲ. ಇವತ್ತಿಗೂ ರಾಜ್ಯ ಸರ್ಕಾರ, ಅದು ಹಿಂದಿನ ಸರ್ಕಾರ ಇರಬಹುದು, ಈ ಸರ್ಕಾರ ಇರಬಹುದು ಅಥವಾ ಮುಂದಿನ ಸರ್ಕಾರ ಇರಬಹುದು, ಎಲ್ಲಾ ಸರ್ಕಾರಗಳೂ ಕೂಡ 524.2 ಮೀಟರ್ ಎತ್ತರ ಅಣೆಕಟ್ಟು ಕಟ್ಟುವ ನಮ್ಮ ಹಕ್ಕನ್ನು ಪ್ರತಿಪಾದನೆ ಮಾಡುವುದಕ್ಕೆ, ಅದನ್ನು ಉಳಿಸಿಕೊಳ್ಳುವುದಕ್ಕೆ ನಾವು ಸಾಕಷ್ಟು ಪ್ರಯತ್ನ ಮಾಡಿದ್ದೇವೆ. ಇದಕ್ಕಿಂತ ನಾವು ಹೆಚ್ಚು ಹೇಳುವುದಕ್ಕೆ ಹೋದರೆ ಮತ್ತೆ ನಾವು ಸುಪ್ರೀಂ ಕೋರ್ಟ್ ಮುಂದೆ ನಿಂತುಕೊಳ್ಳಬೇಕಾದಂತಹ ಪ್ರಸಂಗ ಬರಬಹುದು. ಅಂತಹ ಪ್ರಸಂಗ ಬಾರದೇ ಇರಲೆಂಬ ಕಾರಣಕ್ಕಾಗಿ ನಮಗೆ ಅಲ್ಲಿ ನಿರ್ಬಂಧವನ್ನು ಹೇರಿದ್ದಾರೆ. ಪ್ರತಿಕಾಗೋಷ್ಠಿಯಲ್ಲಿ ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ನಮ್ಮ ನಿಲುವು ಇದೇ ಎಂದು ನಾವು ಹೇಳಿದಷ್ಟಕ್ಕೇ ನಾವು ಸುಪ್ರೀಂ ಕೋರ್ಟ್‌ನ ಮುಂದೆ ಹೋಗಿ ನಿಲ್ಲಬೇಕಾಗಿಯುತ. ಇದನ್ನು ಶ್ರೀಗಳವರು ಗಮನಿಸುತ್ತಾರೆಂದು ನಾನು ಭಾವನೆ ಮಾಡುತ್ತೇನೆ. ನಾನು ರಾಜ್ಯ ಸರ್ಕಾರದ ವತಿಯಿಂದ ಅವರಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ನಾನು ರಾಜ್ಯ ಸರ್ಕಾರದ ಮೇಲೆ ವಿಶ್ವಾಸವಿಡಿ, ಈ ಶಾಸನ ಸಭೆಯ ಎಲ್ಲಾ ಸದಸ್ಯರ ಮೇಲೆ ವಿಶ್ವಾಸವಿಡಿ. ನಾವೆಲ್ಲರೂ ಸೇರಿ ಒಳ್ಳೆಯ ಕೆಲಸ ಮಾಡುತ್ತೇವೆ. ನೀವು ಯಾವ ಉದ್ದೇಶಕ್ಕಾಗಿ ಉಪವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದೀರೋ, ಆ ಒಂದು ಉದ್ದೇಶ ಸಾಧನೆಯ ಏಜೆಂಟರೆಂದು ನಮ್ಮನ್ನು ಸ್ವಾಮೀಜಿಯವರು ತಿಳಿದಿಕೊಳ್ಳಲಿ. ನಿಮ್ಮ ಪರವಾಗಿ ಕೆಲಸ ಮಾಡತಕ್ಕ ಸರ್ಕಾರ ಇದೆಂದು ಸ್ವಾಮೀಜಿಯವರು ಭಾವನೆ ಮಾಡಿಕೊಂಡು ಉಪವಾಸ ಮುಷ್ಕರವನ್ನು ವಾಪಸ್ಸು ತೆಗೆದುಕೊಂಡು ಪರಿಸ್ಥಿತಿ ಶಾಂತವಾಗುವುದಕ್ಕೆ ಸರ್ಕಾರದ ಜೊತೆಗೆ ಸಹಕರಿಸಬೇಕೆಂದು ನಾನು ಈ ಸದನದ ಮೂಲಕ ಶ್ರೀಗಳವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಇಷ್ಟನ್ನು ಮಾತ್ರ ಇಲ್ಲಿ ಹೇಳಬಲ್ಲೆ.

ಶ್ರೀ ಡಿ.ವಿ. ಸದಾನಂದಗೌಡ : ಸರ್ಕಾರದ ವತಿಯಿಂದ ಯಾರಾದರೂ ಒಬ್ಬ ಪ್ರಮುಖರು ಪ್ರತಿನಿಧಿಯಾಗಿ ಅಲ್ಲಿಗೆ ಹೋಗಿ ಸ್ವಾಮೀಜಿಯವರ ಗಮನಕ್ಕೆ ಈ ಎಲ್ಲಾ ವಿಚಾರಗಳನ್ನು ತಂದರೆ ಸೂಕ್ತವೆಂದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸಂಬಂಧಪಟ್ಟ ಮಂತ್ರಿಗಳು ಅವರ ಜೊತೆ ಇಡೀ ರಾತ್ರಿ ಚರ್ಚೆ ಮಾಡಿ ಸ್ಪಷ್ಟವಾಗಿ ಇರತಕ್ಕಂಥ ಎಲ್ಲಾ ವಿಚಾರಗಳನ್ನೂ ಕೂಡ ಅವರಿಗೆ ತಿಳಿಸಿ ಕೊಟ್ಟಿದ್ದಾರೆ. ಸರ್ಕಾರ ಎಷ್ಟು ಆಲೋಕೇಷನ್ ಕೊಟ್ಟಿದೆ, ಏನೇನು ಪ್ರಯತ್ನಗಳನ್ನು ಮಾಡುತ್ತಿದೆ ಎಂಬುದೆಲ್ಲವನ್ನೂ ಕೂಡ ಅವರಿಗೆ ತಿಳಿಸಲಾಗಿದೆ. ಕೆಲವು ವಿಚಾರಗಳನ್ನು ನಾವು ಒಂದು ಹಂತದಲ್ಲಿ ನಿಲ್ಲಿಸುವುದು ಒಳ್ಳೆಯದು. ಅಲ್ಲಿಂದ ಮುಂದಕ್ಕೆ ಹೋಗುವುದಕ್ಕಾಗುವುದಿಲ್ಲ. ಅಷ್ಟು ದೂರದವರೆಗೆ ಅವರು ಹೋಗಿದ್ದಾರೆ. ನಾವು ಶೀಘ್ರದಲ್ಲೇ ಸರ್ವೋಚ್ಚ ನ್ಯಾಯಾಲಯದ ತೀರ್ಮಾನವನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಆ ತೀರ್ಮಾ ಬಂದರೆ ಎಲ್ಲವೂ ಸರಿ ಹೋಗಬಹುದು. ಉಪವಾಸ ಮಾಡುತ್ತಿರುವವರು ಸರ್ಕಾರ ಏನು ಮಾಡಬೇಕೆಂದು ಹೇಳಿದರೆ ನಾವು ಆ ಕೆಲಸವನ್ನು ಮಾಡಲಿಕ್ಕೆ ತಯಾರಿದ್ದೇವೆ. ಇಷ್ಟು ವಿಚಾರಗಳನ್ನು ನಾನು ಈ ಸದನದ ಮೂಲಕ ಶ್ರೀಗಳವರಿಗೆ ಮನವರಿಕೆ ಮಾಡಿ ಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಅವರು ನಮ್ಮ ಕಳಕಳಿಯ ಪ್ರಾರ್ಥನೆಯನ್ನು ಮನ್ನಿಸಿ ಉಪವಾಸ ಸತ್ಯಾಗ್ರಹವನ್ನು ವಾಪಸ್ ತೆಗೆದುಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ : ಮಾನ್ಯ ಮುಖ್ಯಮಂತ್ರಿಗಳೇ, ಮಾನ್ಯ ಸ್ವಾಮೀಜಿಯವರನ್ನು ಪ್ರಾರ್ಥನೆ ಮಾಡಿಕೊಂಡು ಉಪವಾಸ ಮುಷ್ಕರ ಕೈಬಿಡುವಂತೆ ಒಲಿಸುವುದು ಒಳ್ಳೆಯದು.

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಅವರ ಜೊತೆ ವಿಡಿಯೋ ಕಾನ್ಫರೆನ್ಸ್ ಮಾಡಲಿಕ್ಕೆ ಸುಮಾರು ಪ್ರಯತ್ನಗಳನ್ನು ಮಾಡಿ ಕೊನೆಗೆ ಸಿಗದೇ ಟೆಲಿಫೋನ್ ಮುಖಾಂತರ ಅಲ್ಲಿರತಕ್ಕಂಥ ಮುಖಂಡರುಗಳ ಜೊತೆಗೆ ಚರ್ಚೆ ಮಾಡಿದ್ದಾರೆ. ಅವರು ವಿಷಯವನ್ನು ಬಹಳ ಗಂಭೀರವಾಗಿಯೇ ಪರಿಗಣಿಸಿದ್ದಾರೆ. ಆದಾಗ್ಯೂ ಕೂಡ ಈ ಸತ್ಯಾಗ್ರಹವನ್ನು ಅವರು ಮುಂದುವರೆಸುತ್ತಿದ್ದಾರೆ. ಮೊದಲಿಗೆ ನಮ್ಮ ಮುದ್ದೇಬಿಹಾಳ ತಾಲ್ಲೂಕಿನಿಂದಲೇ ಈ ಹೋರಾಟ ಪ್ರಾರಂಭವಾಯಿತು. ಕೇಂದ್ರ ಸರ್ಕಾರ ಅಫಿಡವಿಟ್ ಫೈಲ್ ಮಾಡಿದಾಗ ಆರಂಭಗೊಂಡ ಅಲ್ಲಿನ ಹೋರಾಟದ ನೇತೃತ್ವವನ್ನು ನಾನೇ ವಹಿಸಿದ್ದೆ. ಆದರೆ ಈಗ ಅದು ಬೇರೆ ಬೇರೆ ದಿಕ್ಕಿನಲ್ಲಿ ಹೋಗುತ್ತಿದೆ. ಎಲ್ಲಾ ರೀತಿಯ ಪ್ರಯತ್ನವನ್ನೂ ಸಹ ಸರ್ಕಾರ ಮಾಡಿದೆ. ಇದಕ್ಕಾಗಿ ಈಗಾಗಲೇ ಲಕ್ಷಾಂತರ ರೂಪಾಯಿಗಳು ಖರ್ಚಾಗಿದೆ. ಅಲ್ಲಿಗೆ ಹೆಲಿಕ್ಯಾಪ್ಟರ್‌ನಲ್ಲಿ ಹೋಗಲಿಕ್ಕೆ ಪ್ರಯತ್ನಿಸಲಾಗಿದೆ. ಟೆಲಿಫೋನ್ ಮತ್ತು ವಿಡಿಯೋ ಕಾನ್ಫರೆನ್ಸ್ ಮೂಲಕ ಚರ್ಚೆ ಮಾಡಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಪಟ್ಟಿದ್ದಾರೆ. ಸಂಬಂಧಪಟ್ಟ ಮಾನ್ಯ ಮಂತ್ರಿಗಳಾದ ಹೆಚ್.ಕೆ. ಪಾಟೀಲ್‌ರವರೂ ಕೂಡ ಅಲ್ಲಿಗೆ ಹೋಗಿದ್ದಾರೆ. ಜಿಲ್ಲಾ ಉಸ್ತುವಾರಿ ಮಂತ್ರಿಗಳು, ಎಲ್ಲಾ ಸದಸ್ಯರು ಕೂಡ ತಮ್ಮ ಕೈಲಾದ ಪ್ರಯತ್ನ ಪಟ್ಟಿದ್ದಾರೆ. ಈ ರೀತಿ ಇದಕ್ಕೆ ಏನೆಲ್ಲಾ ಮಾಡಬಹುದೋ ಆ ಎಲ್ಲಾ ಪ್ರಯತ್ನಗಳನ್ನೂ ಕೂಡ ಸರ್ಕಾರ ಮಾಡಿದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ನಾಡಗೌಡರು ಮುದ್ದೇಬಿಹಾಳದಲ್ಲಿ ಪ್ರಾರಂಭವಾದ ಹೋರಾಟದ ನೇತೃತ್ವವನ್ನು ಆಗ ನಾನೇ ವಾಹಿಸಿದ್ದೆ ಎಂದು ಹೇಳಿದರು. ಈಗ ಆ ಹೋರಾಟ ಬೇಡವೆಂದು ಅವರೇಕೆ ಹೇಳುತ್ತಿದ್ದಾರೆ?

ಶ್ರೀ ಅಪ್ಪಾಜಿ ಎಸ್.ನಾಡಗೌಡ : ಆಗ ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಹಿಯರಿಂಗ್ ಶುರುವಾಗಿರಲಿಲ್ಲ. ಕೇಂದ್ರ ಸರ್ಕಾರದವರು ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಏನೊಂದು ಪ್ರಮಾಣ ಪತ್ರವನ್ನು ಸಲ್ಲಿಸಿದ್ದರೋ, ಆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಸರಿಯಿಲ್ಲ ಎಂಬ ವಾದಕ್ಕೆ ಮಾತ್ರ ಬೆಂಬಲ ನೀಡಿ ನಾವು ಹೋರಾಟ ಮಾಡಿದ್ದೆವು. ಬೇರೆ ಯಾವ ಕಾರಣಕ್ಕೂ ಹೋಗಿರಲಿಲ್ಲ. ತದನಂತರ ಸದರಿ ಪ್ರಕರಣದ ಹಿಯರಿಂಗ್ ಡೇಟ್ ಕೊಟ್ಟು, ಜಡ್ಜ್‌ಮೆಂಟ್ ರಿಸರ್ವ್ ಇದ್ದಂತಹ ಸಂದರ್ಭದಲ್ಲಿ ನಾವು ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಮಾನ್ಯತೆಯನ್ನು ಕೊಡಬೇಕಾಗುತ್ತದೆ. ಸರ್ವೋಚ್ಚನ್ಯಾಯಾಲಯದ ತೀರ್ಪಿಗೆ ಮಾನ್ಯತೆಯನ್ನು ಕೊಡಬೇಕಾಗುತ್ತದೆ. ಸರ್ವೋಚ್ಚನ್ಯಾಯಾಲಯದ ತೀರ್ಪು ನಮಗೆ ನ್ಯಾಯ ದೊರಕಿಸಿಕೊಡಬಹುದೆಂಬ ನಿರೀಕ್ಷೆಯಲ್ಲಿ ಈ ಸತ್ಯಾಗ್ರಹವನ್ನು ಮುಂದುವರೆಸುವುದು ತಪ್ಪೆಂದು ನಾವೆಲ್ಲರೂ ಕೂಡ ಹೋಗಿ ಕೇಳಿಕೊಂಡರೂ ಅವರು ಇದನ್ನು ಮುಂದುವರೆಸುತ್ತಿದ್ದಾರೆ. ಇದು ಸರಿಯಲ್ಲ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ : ತೀರ್ಪು ಎಷ್ಟು ದಿನಗಳಲ್ಲಿ ಬರಬಹುದು?

ಅಧ್ಯಕ್ಷರು : ಅದು ಹೇಗೆ ಹೇಳಲಿಕ್ಕಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಸುಬ್ಬಾರೆಡ್ಡಿಯವರು ದೊಡ್ಡ ವಕೀಲರಾಗಿದ್ದಾರೆ. ಅವರೇ ಆ ಬಗ್ಗೆ ಹೇಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಹಿರಿಯ ವಕೀಲರಾದ ಸುಬ್ಬಾರೆಡ್ಡಿಯವರಿಗೇ ಇದು ಗೊತ್ತಿರಬೇಕು.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಸುಬ್ಬಾರೆಡ್ಡಿಯವರನ್ನು ಈ ಸದನದ ರಾಯಭಾರಿಯಾಗಿ ಅದನ್ನು ತಿಳಿದುಕೊಂಡು ಬರಲು ಕಳುಹಿಸಿಕೊಡೋಣ.

ಅಧ್ಯಕ್ಷರು : ಈಗ ಶೂನ್ಯ ವೇಳೆ ಮುಗಿಯಿತು.

ಶ್ರೀ ಡಿ.ಬಿ. ಚಂದ್ರೇಗೌಡ : ಆಗಲೇ ಕೆಲವು ಮಾನ್ಯ ಸದಸ್ಯರು ಸರ್ಕಾರ ಸದನದಲ್ಲಿ ರಾಜ್ಯದ ಆರ್ಥಿಕ ಸ್ಥಿತಿಗತಿ ಬಗ್ಗೆ ಮಂಡಿಸಿದ ಶ್ವೇತಪತ್ರದ ಕನ್ನಡ ಅನುವಾದದ ಪ್ರತಿಯನ್ನು ಒದಗಿಸುವ ಬಗ್ಗೆ ಪ್ರಸ್ತಾಪ ಮಾಡಿದರು. ಅದು ಸಿದ್ಧವಾಗುತ್ತಿದ್ದು 13ನೇ ದಿನಾಂಕದಂದು ಅದನ್ನು ಮಾನ್ಯ ಸದಸ್ಯರುಗಳಿಗೆ ಒದಗಿಸಿಕೊಡಲಾಗುವುದು ಎಂದು ನಾನು ತಿಳಿಸಬಯಸುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನಮ್ಮ ಕ್ಷೇತ್ರದಲ್ಲಿ ಜಾನುವಾರುಗಳು ಸಾಯುತ್ತಿವೆ. ಅದರ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆಯಬೇಕಾಗಿತ್ತು.

ಅಧ್ಯಕ್ಷರು : ಮಾನ್ಯ ಪಶು ಸಂಗೋಪನಾ ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಸ್ವಲ್ಪ ಬ್ಯುಸಿಯಾಗಿದ್ದಾರೆ. ಅವರು ನಾಳೆ ಬರುತ್ತಾರೆ. ನಾಳೆ ಶೂನ್ಯ ವೇಳೆಯಲ್ಲಿ ಇದೇ ವಿಷಯ ತಮಗೆ ಪ್ರಸ್ತಾಪಿಸಲು ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಸುಭಾಷ್ ಕಲ್ಲೂರು : ಶೂನ್ಯ ವೇಳೆಯಲ್ಲಿ ನಮ್ಮ ಬೀದರ್ ಜಿಲ್ಲೆ ಹುಮ್ನಾಬಾದ್ ತಾಲ್ಲೂಕಿನ ವಿಚಾರವೊಂದನ್ನು ಪ್ರಸ್ತಾಪಿಸಬೇಕಾಗಿತ್ತು.

ಅಧ್ಯಕ್ಷರು : ಹೋಂ ಮಿನಿಸ್ಟರ್ ಸದನದಲಿಲ್ಲ. ನಾಳೆ ಅವರನ್ನು ಕರೆಸುತ್ತೇನೆ. ಅವರಿದ್ದಾಗಲೇ ನೀವು ವಿಷಯ ಪ್ರಸ್ತಾಪ ಮಾಡಿದರೆ ನಿಮಗೆ ಸರಿಯಾದ ಉತ್ತರ ಸಿಗುತ್ತದೆ. ಆದ್ದರಿಂದ ನಾಳೆ ಪ್ರಸ್ತಾಪಿಸಿ.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ : ಮಾನ್ಯ ಅಧ್ಯಕ್ಷರೇ, ಕಳೆದ 15 ದಿವಸಗಳಿಂದ ಹಾವೇರಿ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೋರಾಟ ನಡೆಯುತ್ತಿದೆ. ಅದರ ಬಗ್ಗೆ ನಾನು ಗಮನ ಸೆಳೆಯುವ ಸೂಚನೆಯೊಂದನ್ನು ಕಳುಹಿಸಿಕೊಟ್ಟಿದ್ದೆ. ಇಲ್ಲಿಯವರೆಗೂ ಅದರ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ನನಗೆ ಅವಕಾಶ ಮಾಡಿಕೊಟ್ಟಿಲ್ಲ.

ಅಧ್ಯಕ್ಷರು : ಸುಮಾರು 7-8 ಗಮನ ಸೆಳೆಯುವ ಸೂಚನೆಗಳಿಗೆ ಉತ್ತರ ಬಂದಿದೆ. ದಿನಕ್ಕೆರಡರಂತೆ ಗಮನ ಸೆಳೆಯುವ ಸೂಚನೆಗಳನ್ನು ಅಜೆಂಡಾದಲ್ಲಿ ಸೇರಿಸುತ್ತಿದ್ದೇವೆ. ಈ ಅಧಿವೇಶನ ಮುಗಿಯಲು ಇನ್ನೂ ಸಮಯ ಇದೆ. ಅಷ್ಟರೊಳಗೆ ತಮ್ಮ ಸೂಚನೆ ಬರಬಹುದು. ಅಲ್ಲಿ ಬಹಳ ತೊಂದರೆಯಾಗಿದ್ದರೆ ಅದಕ್ಕೆ ಉತ್ತರ ಬಂದಿದ್ದರೆ ಬೇಕಾದರೆ ನಾಳೆಯೇ ತಮ್ಮ ಗಮನ ಸೆಳೆಯುವ ಸೂಚನೆಯನ್ನು ಅಜೆಂಡಾದಲ್ಲಿ ಸೇರಿಸಿಕೊಳ್ಳೋಣ.

4. ಗಮನ ಸೆಳೆಯುವ ಸೂಚನೆಗಳು

ಅ) ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಅಭಿವೃದ್ಧಿಗಾಗಿ ಕರ್ನಾಟಕ ಕರಾವಳಿ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸುವುದು.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ಸುಮಾರು 350 ಕಿ.ಮೀ ವಿಸ್ತೀರ್ಣವಿದ್ದು ಇದಕ್ಕೆ ತಾಗಿರುವ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಪ್ರತ್ಯೇಕವಾದ ಭೌಗೋಳಿಕ ಮತ್ತು ಪ್ರಾಕೃತಿಕ ಲಕ್ಷಣಗಳು ಹೊಂದಿದೆ. ಕರ್ನಾಟಕ ರಾಜ್ಯದ ಇತರ ಭಾಗಗಳಿಂದ ಎಲ್ಲಾ ದೃಷ್ಟಿಯಲ್ಲೂ ವಿಭಿನ್ನವಾಗಿದ್ದು ಇಲ್ಲಿಯ ಅಭಿವೃದ್ಧಿ ಕಾರ್ಯಗಳು ಮತ್ತು ಪ್ರಾಕೃತಿಕ ವಿಕೋಪಗಳು